ಅವನು ಮನೆಗೆ ಹೋದ. ಇನ್ನು ಆ ಕಡೆಗೆ ಹೋಗಲೇಬಾರದು. ಆತ ಕೆಲಸದಲ್ಲಿ ಮಗ್ನನಾಗಲು ಶ್ರಮಿಸಿದ. ಏನೋ ಮನಸ್ಸಿಗೆ ಏಕಾಗ್ರತೆ ಸಿಗುವುದಿಲ್ಲ. ಅಪರಿಚಿತ ನಗರ. ಅಪರಿಚಿತ ಭಾಷೆ. ಹೋ! ಎಲ್ಲವೂ ಅಪರಿಚಿತವೇ. ಆದರೂ ಏನಂತೆ? ಹೆಣ್ಣು ಗಂಡು ಪರಸ್ಪರ ಆಕರ್ಷಣೆಗೊಳಗಾಗುತ್ತಾರೆ. ಆತ ಯೋಚಿಸಿದ. ಈ ಪ್ರಪಂಚದಲ್ಲಿ ಎಷ್ಟು ಸಮಯ ಬದುಕಬೇಕು? ಮನಸ್ಸಿನಲ್ಲೇನೋ ದೊಡ್ಡ ಆತಂಕ. ಈ ಏಕಾಂಗಿತನ ಒಳ್ಳೆಯದೋ? ಆತ ರಾತ್ರಿಹೊತ್ತು ಹೊರಗಿಳಿದ. ಒಳ್ಳೆಯ ಬೆಳದಿಂಗಳು. ಸದ್ದು ಗದ್ದಲ. ಜನರ, ವಾಹನಗಳ ಓಡಾಟವಿದೆ. ಅವನು ಹಾಗೆ ಮೈದಾನದ ಹತ್ತಿರ ತಲುಪಿದ. ಮರದ ಅಡಿಯಲ್ಲಿರುವ ಬೆಂಚೊಂದರಲ್ಲಿ ಕುಳಿತ. ಸುತ್ತಲೂ ಮೈದಡವುವ ತಂಗಾಳಿ. ಓ! ಆಕಾಶ ತುಂಬಾ ಹೂಗಳಂತೆ ನಕ್ಷತ್ರಗಳು. ಆದರೆ, ಆ ಗಲ್ಲಿ ಮಾತ್ರ ಶೂನ್ಯ.

ಅವಳೆಲ್ಲಿ?

ಅದಾದ ಅನಂತರ ಪ್ರತಿದಿನವೂ ಮತ್ತೆ ಅವಳನ್ನು ನೋಡಲಾರಂಭಿಸಿದ. ಕಣ್ಣುಗಳು ಪರಿಚಿತವಾದವು. ಅವಳು ಅಬಾಧಿತವಾಗಿ ಮುಗುಳ್ನಗುತ್ತಾಳೆ. ಪುರುಷನಾದರೂ ಅವನಿಗೇಕೆ ನಗಲಾಗುವುದಿಲ್ಲ? ಸಭ್ಯತೆಯ ಅಡಿಗೆ ಒತ್ತಿ ಜಜ್ಜಿ ಸತ್ತುಬಿದ್ದ ಪೌರುಷವೇ! ಪ್ರೀತಿಯಿಂದ ಮುಗುಳ್ನಗಬೇಕು! ಓ, ಅದು ವಿಕಾರವಾಗಿ ಹೋದರೋ? ಅವನು ಎದ್ದು ನಡೆದು ಮನೆ ಸೇರಿದ.

ಅವನಂತೆ ಅವಿವಾಹಿತ ಜೊತೆಗಾರರು ಹೆಣ್ಣುಗಳನ್ನು ಕುರಿತು ಮಾತನಾಡುತ್ತಿದ್ದರು. ಹೆಣ್ಣುಗಳನ್ನು ಕುರಿತಾದ ಹುಚ್ಚು ಹಿಡಿದು ತಲೆ ತುಂಬಾ ಅವರದೇ ಆಲೋಚನೆಗಳನ್ನು ತುಂಬಿಸಿಕೊಂಡಿದ್ದಾರೆ. ಆತನನ್ನು ಕಂಡಾಕ್ಷಣ ಅವರು ಸಂಭಾಷಣೆಯ ವಿಷಯವನ್ನು ಬದಲಾಯಿಸಿದರು. ಎಲ್ಲರೂ ಭಯಂಕರ ಲೈಂಗಿಕ ದಾಹದಲ್ಲಿದ್ದಾರೆ. ಅದೆಷ್ಟೋ ವರ್ಷಗಳಿಂದ ಹಾಗೆಯೇ ಬದುಕುತ್ತಿದ್ದಾರೆ. ಯಾರಿಗೂ ಮದುವೆಯಾಗಿ ಹೆಂಡತಿಯನ್ನು ಸಾಕುವ ಆರ್ಥಿಕ ಶಕ್ತಿಯಿಲ್ಲ. ನಗರದಲ್ಲಿ ನೆಲೆಸಿದ್ದಾರೆ. ಸಿಗುವ ಸಂಬಳ ಯಾವುದಕ್ಕೂ ಸಾಕಾಗುವುದಿಲ್ಲ. ಆದರೂ... ಹೆಣ್ಣೊಬ್ಬಳು ದಾರಿಯಲ್ಲಿ ಹೋಗುವಾಗ ಎಲ್ಲರೂ ಆಸೆಗಣ್ಣುಗಳಿಂದ ನೋಡುವರು, ಮೊದಮೊದಲು ಎಲ್ಲರೂ ಸಂಭಾವಿತರಂತೆ ಭಾಸವಾದರು. ಕ್ರಮೇಣ ಅದು ಸವೆದು ಮಾಸುತ್ತಾ ಹೋಯಿತು. ಹೆಣ್ಣುಗಳನ್ನು ಕುರಿತು ಹೇಳುವಾಗ ಅವನು ಮಾತ್ರ ಹೇಳುತ್ತಿದ್ದ.

‘ಛೇ ಮೋಸ? ನಾವು ಸುಸಂಸ್ಕೃತರಲ್ಲವೇ?’

ಆ ವಿಷಯದಲ್ಲಿ ಯಾರಿಗೂ ಅಭಿಪ್ರಾಯಭೇದವಿಲ್ಲ. ಸಂಸ್ಕಾರವಿಲ್ಲದವರು ಯಾರಾದರೂ ಇದ್ದಾರೆಯೆ? ಭಾಷಣದ ವೇದಿಕೆಗಳಲ್ಲಿ, ಪತ್ರಿಕೆಗಳಲ್ಲಿ... ಹಗಲಿನಲ್ಲಿ ಎಲ್ಲರೂ ಸಂಭಾವಿತರಂತೆಯೇ ಇರುತ್ತಾರೆ. ಜೊತೆಗಾರರನ್ನು ಅವನು ಆಕ್ಷೇಪಿಸುತ್ತಿದ್ದ. ಅದಕ್ಕೆ ಕಾರಣವೂ ಇದೆ. ಹೆಣ್ಣುಗಳಂತೆ ಅವರು ಒಂದೊಂದನ್ನು ಪ್ರೀತಿಸುತ್ತಿದ್ದರು. ಒಬ್ಬಾತ ಒಂದು ಗಿಳಿಯನ್ನು, ಮತ್ತೊಬ್ಬ ಒಂದು ನಾಯಿಯನ್ನು, ಇನ್ನೊಬ್ಬ ಒಂದು ಅಳಿಲನ್ನು, ಹಿಡಿದು ಸಾಕಲು ಪ್ರಯತ್ನಿಸುತ್ತಿದ್ದಾನೆ – ಸಂಸ್ಕಾರವಿಲ್ಲದವರು.

ಅವನು ಮುಖಕ್ಕೆ ಪೌಡರ್ ಹಾಕಿ ಕೂದಲನ್ನು ಸರಿಯಾಗಿ ಬಾಚಿದ. ಕಳ್ಳನಂತೆ ಹೊರಗಿಳಿದು ನಡೆದ. ಮಾನ್ಯರು ಯಾವಕಡೆಗೆ ಹೋಗುತ್ತಿದ್ದಾರೆ! ಅವನು ಆ ಬೆಂಚಿನ ಮೇಲೆ ಒಂದು ಕಾಲೂರಿ ರಸ್ತೆಯ ಬದಿಯಲ್ಲಿರುವ ಗಲ್ಲಿಯ ಆಚೆಗಿನ ತಗ್ಗಿನ ಪ್ರದೇಶದತ್ತ ನೋಡಿದ. ಮರಗಳ ನಡುವಿನಲ್ಲಿರುವ ಗುಡಿಸಲಿನ ಅಂಗಳದಲ್ಲಿ ಅವಳು ನಿಂತಿದ್ದಾಳೆ! ಜಡೆಯಲ್ಲಿ ಕಾಡು ಹೂಗಳು. ಮೊಲೆಗಳ ಗಾತ್ರ ಮತ್ತು ಸೌಂದರ್ಯವನ್ನು ಪ್ರದರ್ಶಿಸಿಕೊಂಡು ಬೆಳ್ಳಗಿನ ಬ್ರಾ ಧರಿಸಿದ್ದಾಳೆ. ತುಂಬಾ ತೆಳ್ಳಗಿನ ಮೃದುವಾದ ಲಂಗ. ಅದರ ಮೂಲಕ... ಹೋ!... ಹೃದಯ ಭಯಂಕರ ವೇಗದಲ್ಲಿ ಬಡಿಯುತ್ತಿದೆ. ಹಾಯ್! ಅವನನ್ನು ಅವಳು ನೋಡಿದಳು. ಬೇರೆ ಯಾರಾದರೂ ಅವನನ್ನು ಗಮನಿಸುತ್ತಿದ್ದಾರೋ?